ದಿನಾಂಕ 12.08.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ- ಪ್ರತಿವಾದಿಗಳ ಪರ ವಕೀಲರಾದ ಶ್ರೀ. ಬಿ.ಎಸ್.ಪಿ ರವರಿಂದಃ-

ಕ್ರಯದ ಮಾತುಕತೆಯ ಸಂದರ್ಭದಲ್ಲಿ ನಾನು ಭಾಗವಹಿಸಿದ್ದೆನು. ಮಾತುಕತೆಯು 1ನೇ ಪ್ರತಿವಾದಿಯ ಮನೆಯಲ್ಲಿ ಆಗಿರುತ್ತದೆ. ಮಾತುಕತೆಯಾದ ನಿಖರವಾದ ದಿನಾಂಕ ನನಗೆ ನೆನಪಿಲ್ಲ. ಕರಾರುಪತ್ರವಾಗುವುದಕ್ಕಿಂತ ಒಂದು ತಿಂಗಳ ಮೊದಲು ಮಾತುಕತೆಯಾಗಿತ್ತು. ಸದರಿ ಮಾತುಕತೆಯಲ್ಲಿ ಕ್ರಯದ ಒಟ್ಟು ಹಣ, ಮುಂಗಡ ಹಣ ನೀಡುವ ದಿನಾಂಕ ಹಾಗೂ ಒಪ್ಪಂದ ಕ್ರಯದ ಕರಾರುಪತ್ರ ಮಾಡುವ ದಿನಾಂಕದ ಬಗ್ಗೆ ಮಾತುಕತೆಯಾಗಿತ್ತು. ದಾವಾ ಸ್ವತ್ತಿಗೆ ಸಂಬಂಧಿಸಿದ ದಾಖಲೆಗಳನ್ನು ನಾನು ನೋಡಿರುತ್ತೇನೆ. ನಾನು ದಾವಾಸ್ವತ್ತಿನ ದಾಖಲೆಗಳನ್ನು ನೋಡಿದ ಸಂದರ್ಭದಲ್ಲಿ, ಸದರಿ ಸ್ವತ್ತು ಕಂದಾಯಕ್ಕೆ ಒಳಪಟ್ಟಿರಲಿಲ್ಲ.

ನಾನು ದಾವಾಸ್ವತ್ತಿಗೆ ಸಂಬಂಧಿಸಿದ ದಾಖಲೆಯನ್ನು ನೋಡಿದ ಸಂದರ್ಭದಲ್ಲಿ ಸರ್ವೆ ನಂ.160/1 ರಲ್ಲಿ ಒಟ್ಟು 97 ಸೆಂಟ್ಸ್ ಜಾಗ ಇತ್ತು. ಸದರಿ 97 ಸೆಂಟ್ಸ್ ಜಾಗದ ಪೂರ್ವದ ಕಡೆ 10 ಸೆಂಟ್ಸ್ ಜಾಗವನ್ನು ವಾದಿಗೆ ನೀಡಲು ಮಾತುಕತೆಯಾಗಿತ್ತು. ಕರಾರುಪತ್ರದ ದಿನಾಂಕದಂದೇ ದಾವಾಸ್ವತ್ತಿನ ಸ್ವಾಧೀನವನ್ನು ವಾದಿಗೆ 1ನೇ ಪ್ರತಿವಾದಿಯು ಬಿಟ್ಟುಕೊಡುವ ಬಗ್ಗೆ ಮಾತುಕತೆಯಾಗಿತ್ತು. ನಾನು ಕರಾರುಪತ್ರಕ್ಕೆ ಮಧ್ಯಾಹ್ನ 2 ಗಂಟೆಯ ಸಮಯದಲ್ಲಿ ಸಹಿ ಮಾಡಿರುತ್ತೇನೆ. ಕರಾರುಪತ್ರವಾದ ದಿನಾಂಕವೇ ವಾದಿಯು ದಾವಾಸ್ವತ್ತಿನ ಸ್ವಾಧೀನವನ್ನು ಪ್ರತಿವಾದಿಗಳಿಂದ ಪಡೆದುಕೊಂಡಿರುತ್ತಾರೆ. ಕರಾರುಪತ್ರವಾಗುವುದಕ್ಕಿಂತ ಮೂರು ದಿನದ ಮೊದಲೇ ದಾವಾಸ್ವತ್ತನ್ನು

ಖಾಸಗೀ ಭೂ ಮಾಪಕರಿಂದ ಗುರುತಿಸಲಾಗಿತ್ತು. ದಾವಾಸ್ವತ್ತನ್ನು ಅಳತೆ ಮಾಡವ ಸಂದರ್ಭದಲ್ಲಿ ಹಾಗೂ ಅದಕ್ಕೆ ಬೇಲಿಯನ್ನು ಹಾಕುವ ಸಂದರ್ಭದಲ್ಲಿ ನಾನು ಹಾಜರಿದ್ದೆನು. ದಾವಾಸ್ವತ್ತಿನಲ್ಲಿ ವಾದಿ ಕೃಷಿ ಮಾಡಿರುತ್ತಾರೆ. ದಾವಾಸ್ವತ್ತಿನ ನೋಂದಣಿಗೆ ಅಗತ್ಯವಾಗಿ ಬೇಕಾಗಿದ್ದಂತಹ ದಾಖಲೆಗನ್ನು ತಯಾರಿಸುವ ಜವಾಬ್ದಾರಿಯನ್ನು ವಾದಿಯೇ ವಹಿಸಿಕೊಂಡಿದ್ದರು.

ದಾವಾಸ್ವತ್ತಿನ ನೋಂದಣಿಗೆ ಬೇಕಾದ ಅಗತ್ಯ ದಾಖಲೆಗಳನ್ನು ವಾದಿಯು **2016** ರಲ್ಲಿ ತಯಾರಿಸಿ ಇಟ್ಟುಕೊಂಡಿದ್ದರು. **2016** ನೇ ಇಸವಿಯ ಮೇ ಮೂರನೇ ವಾರದಲ್ಲಿ ವಾದಿಯು ನನ್ನ ಬಳಿ ಬಂದು, ನೋಂದಣಿಗೆ ಅಗತ್ಯವಾದ ದಾಖಲೆಗಳು ತನ್ನ ಬಳಿ ಇವೆ ಎಂದು ತಿಳಿಸಿರುತ್ತಾರೆ. ನಂತರ ನಾನು ಮತ್ತು ವಾದಿ, ಪ್ರತಿವಾದಿಗಳ ಮನೆಗೆ ಹೋಗಿ ದಾವಾಸ್ವತ್ತನ್ನು ನೋಂದಣಿ ಮಾಡಿಸಿಕೊಡುವಂತೆ ಕೇಳಿರುತ್ತೇವೆ. ಆಗ **1**ನೇ ಪ್ರತಿವಾದಿಯು ನೋಂದಣಿ ಮಾಡಿಕೊಡಲು ಒಪ್ಪಿರುವುದಿಲ್ಲ. ನಂತರ ವಾದಿಯು **1**ನೇ ಪ್ರತಿವಾದಿಗೆ ತನ್ನ ವಕೀಲರ ಮೂಲಕ ನೋಟೀಸನ್ನು ನೀಡಿರುವುದಿಲ್ಲ.

ವಾದಿಯು ಕ್ರಯದ ಕರಾರುಪತ್ರದ ಷರತ್ತಿನ ಪ್ರಕಾರ ನೋಂದಣಿಗೆ ಅಗತ್ಯವಾಗಿ ಬೇಕಾಗಿದ್ದಂತಹ ದಾಖಲೆಗಳನ್ನು ತಯಾರಿಸಿ ಇಟ್ಟುಕೊಂಡಿರಲಿಲ್ಲ ಎಂದರೆ ಸರಿಯಲ್ಲ. ಬಾಕಿ ಕ್ರಯದ ಪ್ರತಿಫಲದ ಹಣವನ್ನು ನೀಡಲೂ ಸಹಾ ವಾದಿಯು ಸಾಮರ್ಥ್ಯ ಹೊಂದಿರಲಿಲ್ಲ ಹಾಗೂ ಕ್ರಯಪತ್ರವನ್ನು ನೋಂದಣಿ ಮಾಡಿಸಿಕೊಳ್ಳುವ ಇಚ್ಚೆಯನ್ನು ಸಹಾ ಹೊಂದಿರಲಿಲ್ಲ ಎಂದರೆ ಸರಿಯಲ್ಲ. ವಾದಿಯು ಕ್ರಯದ ಕರಾರುಪತ್ರದ ಷರತ್ತುಗಳನ್ನು ಉಲ್ಲಂಘನೆ ಮಾಡಿರುವುದರಿಂದ ಅವರು ದಾವೆಯಲ್ಲಿ ಕೋರಿರುವಂತಹ ಪರಿಹಾರವನ್ನು

ಪಡೆಯಲು ಅರ್ಹರಲ್ಲ ಎಂದರೆ ಸರಿಯಲ್ಲ. ನನಗೆ ಎಲ್ಲಾ ವಿಚಾರಗಳೂ ಗೊತ್ತಿದ್ದರೂ ಸಹಾ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:-** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಾಕ್ಷಿದಾರರ ಸಹಿ) ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.